ಬೆಂಗಳೂರು ಕೃಷಿ ವಿವಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2023ನೇ ಸಾಲಿನಲ್ಲಿ ಕೊಡ ಮಾಡುವ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ ಮತ್ತು ರೈತಮಹಿಳೆ ಹಾಗೂ ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಿದೆ. 4 ವಿಭಾಗಗಳಲ್ಲಿ ಒಟ್ಟು 9 ವಿಧದ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್.ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕೆ ರೈತ/ರೈತಮಹಿಳೆ ಪ್ರಶಸ್ತಿ ಹಾಗೂ ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ/ ರೈತಮಹಿಳೆ ಪ್ರಶಸ್ತಿ, ಕೆನರಾ ಬ್ಯಾಂಕ್ ಪ್ರಾಯೋಜಿತ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ/ ರೈತಮಹಿಳೆ ಪ್ರಶಸ್ತಿ ಹಾಗೂ ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ನೀಡಲಾಗುತ್ತದೆ. ಜಿಲ್ಲಾಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ರೈತ ಮಹಿಳೆ ಪ್ರಶಸ್ತಿ ಹಾಗೂ ತಾಲೂಕು ಮಟ್ಟದಲ್ಲಿ ಅತ್ಯುತ್ತಮ ಯುವ ರೈತ ಪ್ರಶಸ್ತಿ, ಯುವ ರೈತ ಮಹಿಳೆ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ಆಯೋಜಿಸಲಿರುವ 'ಕೃಷಿಮೇಳ-2023' ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲಾಗುತ್ತದೆ. ಆಸಕ್ತರು ಅರ್ಜಿ ನಮೂನೆಯನ್ನು ಬೆಂಗಳೂರು ಕೃಷಿ ವಿವಿ ವೆಬ್‌ಸೈಟ್ (www.uasbangalore.edu.in) ಅಥವಾ ಆಯಾ ಜಿಲ್ಲೆಗಳ ಜಂಟಿ/ಕೃಷಿ ನಿರ್ದೇಶಕರ ಕಚೇರಿ, ಜಿಕೆವಿಕೆಯ ವಿಸ್ತರಣಾ ನಿರ್ದೇಶಕರ ಕಚೇರಿ ಹಾಗೂ ಕೆವಿಕೆಗಳಲ್ಲಿ ಪಡೆದು, ಜು.31ರೊಳಗೆ ಸಲ್ಲಿಸಬೇಕು. ವಿವರಕ್ಕೆ ದೂ: 080-23330153 ಸಂಪರ್ಕಿಸಬಹುದು.

» ಜು.31 ಕೊನೆಯ ದಿನ

19-06-2023
Vijayavani Pg 04

ಕೃಷಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂ.17: ಕೃಷಿ ವಿವಿ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ರಾಜ್ಯ ಮಟ್ಟದ ಪ್ರಶಸ್ತಿಗಳಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ, ರೈತ ಮಹಿಳೆ ಪ್ರಶಸ್ತಿ, ಡಾ.ಎಂ.ಎಚ್.ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ, ರೈತ ಮಹಿಳೆ ಪ್ರಶಸ್ತಿಗಳನ್ನು ರಾಜ್ಯ ವ್ಯಾಪ್ತಿಯಲ್ಲಿ ನೀಡಲು ಅರ್ಜಿ ಕರೆಯಲಾಗಿದೆ.

ಇನ್ನು ಬೆಂಗಳೂರಿನ ಕೃಷಿ ವಿವಿ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳಾದ ಕೆನರಾ ಬ್ಯಾಂಕ್ ಪ್ರಯೋಜಿತ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಡಾ.ಆರ್. ದ್ವಾರಕಿನಾಥ್ ಅತ್ಯುತ್ತಮ ರೈತ, ರೈತ ಮಹಿಳೆ ಪ್ರಶಸ್ತಿ, ಡಾ.ಆರ್.ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಗೆ ಅರ್ಜಿ ಕರೆಯಲಾಗಿದೆ.

ಬೆಂಗಳೂರಿನ ಕೃಷಿ ವಿವಿ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳಿಗೆ ಜಿಲ್ಲಾ ಮಟ್ಟದ ಪ್ರಶಸ್ತಿಗಳಾದ ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಕರೆಯಲಾಗಿದೆ. ಬೆಂಗಳೂರಿನ ಕೃಷಿ ವಿವಿ ಆಡಳಿತ ವ್ಯಾಪ್ತಿಯ 61 ತಾಲೂಕುಗಳಿಗೆ ತಾಲೂಕು ಮಟ್ಟದ ಪ್ರಶಸ್ತಿಗಳಾದ ತಾಲೂಕು ಮಟ್ಟದ ಅತ್ಯುತ್ತಮ ಯುವ ರೈತ ಪ್ರಶಸ್ತಿ, ತಾಲೂಕು ಮಟ್ಟದ ಅತ್ಯುತ್ತಮ ಯುವ ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಗಳನ್ನು ಬೆಂಗಳೂರು ಕೃಷಿ ವಿವಿ ಅಕ್ಟೋಬರ್ ತಿಂಗಳಲ್ಲಿ ಆಯೋಜಿಸಲಿರುವ ಕೃಷಿ ಮೇಳದಲ್ಲಿ ನೀಡಲಾಗುತ್ತದೆ. ನಿಗದಿತ ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರವರ ಕಚೇರಿ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ದೊರೆಯುತ್ತದೆ. ಅರ್ಜಿ ನಮೂನೆಯು ಬೆಂಗಳೂರು ಕೃಷಿ ವಿವಿ ಜಾಲತಾಣ www.uasbangalore.edu.inನಲ್ಲಿಯೂ ಲಭ್ಯವಿರುತ್ತದೆ ಎಂದು ಕೃಷಿ ವಿವಿ ತಿಳಿಸಿದೆ. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಜು.31 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ವಿವರಗಳಿಗೆ ಬೆಂಗಳೂರಿನ ವಿಸ್ತರಣಾ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಅಥವಾ ದೂ.ಸಂ. 080-2333 0153 ಸಂಪರ್ಕಿಸಲು ವಿವಿ ಪ್ರಕಟನೆಯಲ್ಲಿ ತಿಳಿಸಿದೆ.

18-06-2023
Vartha Bharati Pg 03

ಪ್ರಜಾವಾಣಿ
ಸೋಮವಾರ • ಜೂನ್ 19, 2023

ರೈತ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2023ನೇ ಸಾಲಿನ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ 'ಅತ್ಯುತ್ತಮ ರೈತ ಪ್ರಶಸ್ತಿ' ಹಾಗೂ 'ರೈತ ಮಹಿಳೆ ಪ್ರಶಸ್ತಿ'ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯಮಟ್ಟದಲ್ಲಿ ಎಚ್.ಡಿ.ದೇವೇಗೌಡ ಅತ್ಯುತ್ತಮ ರೈತ- ರೈತ ಮಹಿಳೆ ಪ್ರಶಸ್ತಿ, ಎಂ.ಎಚ್.ಮರಿಗೌಡ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಹಾಗೂ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಕ್ಯಾನ್ ಬ್ಯಾಂಕ್ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ನೀಡಲಾಗುವುದು.

ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ರೈತ ಹಾಗೂ ರೈತ ಮಹಿಳೆ, ತಾಲ್ಲೂಕು ಮಟ್ಟದಲ್ಲಿ ಯುವ ರೈತ ಹಾಗೂ ಯುವ ರೈತ ಮಹಿಳೆ ಪ್ರಶಸ್ತಿಗಳನ್ನು ನೀಡಲಾಗುವುದು. ಈ ಅಕ್ಟೋಬರ್‌ನಲ್ಲಿ ನಡೆಯಲಿರುವ ಕೃಷಿ ಮೇಳದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಆಸಕ್ತರು ಅರ್ಜಿ ನಮೂನೆಗಳನ್ನು ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗಳು, ಕೃಷಿ ವಿಜ್ಞಾನ ಕೇಂದ್ರಗಳು ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.uasbangalore.edu.in ನಿಂದಲೂ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೃಷಿ ವಿಸ್ತರಣಾ ನಿರ್ದೇಶಕರ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಂಗಳೂರು ಕೃಷಿ ವಿಶ್ವವಿದ್ಯಾಲಯ.
ಸಂಪರ್ಕ: 080-23330153

18-06-2023
Viswavani Pg 03

ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿವಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸಕ್ತ ರೈತ, ರೈತಮಹಿಳೆ ಮತ್ತು ವಿಸ್ತರಣಾ ಕಾರ್ಯ ಕರ್ತರಿಂದ ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನಿಸ ಲಾಗಿದೆ. ಈ ಪ್ರಶಸ್ತಿಗಳನ್ನು ಬೆಂಗಳೂರು ಕೃಷಿ ವಿವಿ ಅಕ್ಟೋಬರ್‌ನಲ್ಲಿ ಆಯೋಜಿಸಲಿರುವ ಕೃಷಿ ಮೇಳದ ವೇಳೆ ಪ್ರಶಸ್ತಿ ನೀಡಲಾಗುತ್ತದೆ. ಈ ಸಂಬಂಧ ನಿಗದಿತ ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರವರ ಕಛೇರಿ, ವಿಸ್ತ ರಣಾ ನಿರ್ದೇಶಕರ ಕಛೇರಿ, ಜಿಕೆವಿಕೆ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರಗಳಾದ ಹಾಡೋನ ಹಳ್ಳಿ- ದೊಡ್ಡಬಳ್ಳಾಪುರ, ಚಂದುರಾಯನಹಳ್ಳಿ- ಮಾಗಡಿ, ಕಂದಲಿ-ಹಾಸನ, ಕೊನೇಹಳ್ಳಿ- ತಿಪಟೂರು, ಏ.ಸಿ. ಫಾರಂ-ಮಂಡ್ಯ, ಕುರುಬೂರು ಫಾರಂ-ಚಿಂತಾ ಮಣಿ ಮತ್ತು ಹರದನಹಳ್ಳಿ -ಚಾಮರಾಜನಗರ, ವಿಸ್ತರಣಾ ಶಿಕ್ಷಣ ಘಟಕಗಳಾದ ನಾಗನಹಳ್ಳಿ- ಮೈಸೂರಿನಲ್ಲಿ ದೊರೆಯುತ್ತದೆ. ಕೃಷಿ ವಿವಿ ಜಾಲತಾಣ www.uasbangalore.edu.in ನಲ್ಲಿ ಲಭ್ಯವಿರುತ್ತದೆ. ಅರ್ಜಿ ಸಲ್ಲಿಸಲು ಜುಲೈ 31 ಕೊನೆ ದಿನ. ವಿವರಗಳಿಗೆ 080-23330153 ಸಂಪರ್ಕಿಸಿ.

ವಿ ರೈತ ಮಿತ್ರ

■ ಅಂಜೂರದಲ್ಲಿ ಸಸ್ಯಾಭಿವೃದ್ಧಿ ಮತ್ತು ನಾಟಿ ಮಾಡುವ ವಿಧಾನ ತಿಳಿಸಿ.

| ಸುಗುಣ ಬೆಂಗಳೂರು

ಅಂಜೂರವನ್ನು ಆರೆಬಲಿತ ಕಾಂಡದ ತುಂಡುಗಳು ಮತ್ತು ಗೂಟಿ ವಿಧಾನದಿಂದ ಸಸ್ಯಾಭಿವೃದ್ಧಿ ಮಾಡುತ್ತಾರೆ. ಕಾಂಡದ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡುವಾಗ ಅವುಗಳ ಬುಡಭಾಗವನ್ನು 100 ಪಿ.ಪಿ.ಎಂ. ಇಂಡೋಲ್‌ಬ್ಯೂಟ್ರಿಕ್ ಆಮ್ಲ (100 ಮಿ. ಗ್ರಾಂ. 1 ಲೀಟರ್ ನೀರಿನಲ್ಲಿ ಸಿದ್ಧಪಡಿಸಿದ (ಬೇರು ಪ್ರಚೋದಕ) ದ್ರಾವಣದಲ್ಲಿ ಒಂದು ನಿಮಿಷ ಅದ್ದಬೇಕು. ನಂತರ ಈ ತುಂಡುಗಳನ್ನು 1/3 ಭಾಗ ಹಸಿ ಮರಳನ್ನು ತುಂಬಿದ 1.5 ಆಡಿ ಗಿ 6 ಅಂಗುಲ ಆಳತೆಯ ಪಾಲಿಥೀನ್ ಚೀಲಗಳಲ್ಲಿ (250 ಗೇಜ್ ದಪ್ಪ) 20 ತುಂಡುಗಳಂತೆ ಪ್ರತಿ ಚೀಲಕ್ಕೆ ನಾಟಿ ಮಾಡಿ, ಕ್ಲಿಪ್‌ನಿಂದ ಚೀಲವನ್ನು ಸೀಲ್ ಮಾಡಿ ನೆರಳಿನಲ್ಲಿ ಇಡಬೇಕು. ಒಂದು ತಿಂಗಳಲ್ಲಿ ಕಾಂಡದ ತುಂಡುಗಳು ಬೇರು ಬಿಟ್ಟು ನಾಟಿ ಮಾಡಲು ಸಿದ್ಧವಾಗುತ್ತವೆ. ಗೂಟಿ ಸಸಿಗಳನ್ನು ತಯಾರುಮಾಡಲು ಒಲೆ ಬೂದಿ ಮತ್ತು ಕಟ್ಟಿಗೆ ಪುಡಿ (1:1) ಮಿಶ್ರಣವನ್ನು ಬೇರು ಬಿಡುವ ಮಾಧ್ಯಮವಾಗಿ ಬಳಸಬಹುದು. ಬೇರು ಸಹಿತ ಕಾಂಡದ ತುಂಡು ಅಥವಾ ಗೂಟಿ ಸಸಿಗಳನ್ನು ಶಿಫಾರಸು ಮಾಡಿದ ಅಂತರದಲ್ಲಿ 2 ಫನ ಆಡಿ ಗಾತ್ರದ ಗುಣಿಗಳನ್ನು ತೆಗೆದು ಅವುಗಳಲ್ಲಿ ಮಣ್ಣು ಮತ್ತು ಗೊಬ್ಬರಗಳ ಮಿಶ್ರಣವನ್ನು ತುಂಬಿ ನಾಟಿ ಕೈಗೊಳ್ಳಬೇಕು.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

■ ಅರಿಶಿಣ ಬೆಳೆಯಲ್ಲಿ ಕೊಂಬು ಮತ್ತು ಬೇರು ಕೊಳೆಯುವ ರೋಗ ನಿಯಂತ್ರಿಸುವುದು ಹೇಗೆ?

| ಸಂಪತ್ ಹಿರಿಯೂರು ತಾಲೂಕು



ರೋಗಕ್ಕೆ ತುತ್ತಾದ ಗಿಡದ ಎಲೆಗಳು ಹಳದಿ ಬಣ್ಣದಿಂದ ಕೂಡಿದ್ದು ಅಂಬುಗಳು ಒಣಗಲು ಪ್ರಾರಂಭವಾಗುತ್ತವೆ. ನಂತರ ಎಲೆ ಪೂರ್ತಿ ಒಣಗುತ್ತವೆ. ಬುಡ ಭಾಗವು ನೀರಿನಿಂದ ಆವೃತಗೊಂಡು ಮೃದುವಾಗಿರುತ್ತದೆ. ಕೊಂಬು ಕಿತ್ತಳೆ ಬಣ್ಣದಿಂದ ಕಂದು ಬಣ್ಣಕ್ಕೆ ತಿರುಗುತ್ತವೆ. ನಂತರ ಕೊಂಬುಗಳು ಕೊಳೆಯುತ್ತವೆ. ಕೊಳೆತ ಕೊಂಬುಗಳು ಮೃದುವಾಗಿರುತ್ತವೆ.

ನಿರ್ವಹಣೆ: ಏರು ಮಡಿಗಳಲ್ಲಿ ನಾಟಿ ಮಾಡುವುದು, ನೀರು ಚೆನ್ನಾಗಿ ಬಸಿದು ಹೋಗುವ ವ್ಯವಸ್ಥೆ ಮಾಡಬೇಕು. ನಾಟಿಗೆ ಮುಂಚೆ ಕೊಂಬುಗಳನ್ನು ಶೇ.0.3ರ ಕ್ಯಾಪ್ಟಾನ್ ಅಥವಾ 2 ಗ್ರಾಂ ಮೆಟಲಾಕ್ಸಿಲ್ + ಮ್ಯಾಂಕೋಜೆಬ್ ದ್ರಾವಣದಲ್ಲಿ ಅದ್ದಿ ನಾಟಿ ಮಾಡಬೇಕು. ಬೆಳೆಯುವ ಹಂತದಲ್ಲಿ ರೋಗ ಕಂಡು ಬಂದರೆ ಶೇ.1ರ ಬೋರ್ಡೋ ದ್ರಾವಣ ಅಥವಾ ಶೇ.0.3ರ ಮ್ಯಾಂಕೋಜೆಬ್ ಅಥವಾ 2 ಗ್ರಾಂ ಮೆಟಲಾಕ್ಸಿಲ್ + ಮ್ಯಾಂಕೋಜೆಬ್ ದ್ರಾವಣವನ್ನು ಬೇರು ನೆನೆಯುವಂತೆ ಸುರಿಯಬೇಕು.

| ಕ್ರಿಯಾಂಕಾ ಬಿ. ಸಸ್ಯರೋಗ ತಜ್ಞರು

■ ಜೇನು ಕುಟುಂಬಗಳಿಗೆ ಕಡಜಗಳ ಕಾಟ ಜಾಸ್ತಿ ಇದ್ದು, ಇದನ್ನು ನಿಯಂತ್ರಣ ಹೇಗೆ?

| ಸುಬ್ರಮಣ್ಯ ದಕ್ಷಿಣ ಕನ್ನಡ

ಕಡಜಗಳು ಹೆಚ್ಚಾಗಿ ಬಲಹೀನ ಜೇನು ಕುಟುಂಬಗಳ ಮೇಲೆ ದಾಳಿ ಮಾಡಿ ಜೇನು ಹುಳುಗಳನ್ನು ಹಿಡಿದು ತಿನ್ನುತ್ತವೆ. ಮಲೆನಾಡಿನ ಪ್ರದೇಶಗಳಲ್ಲಿ ಇವುಗಳ ಹಾವಳಿ ಹೆಚ್ಚು. ಆಹಾರ ಅಭಾವ ಕಾಲ ಮತ್ತು ಮಳೆಗಾಲದಲ್ಲಿ ಕಡಜಗಳು ಜೇನು ಗೂಡುಗಳಿಗೆ ಬಾಧಿಸುತ್ತವೆ.

ನಿರ್ವಹಣೆ: ಕಡಜಗಳ ವಾಸ ಸ್ಥಾನ ಗುರುತಿಸಿ ರಾತ್ರಿ ಸಮಯದಲ್ಲಿ ಬೆಂಕಿಯಿಂದ ಅವುಗಳ ಗೂಡನ್ನು ಸುಡಬೇಕು. ಕಡಜದ ಗೂಡಿನ ಒಳಗೆ ಒಂದು ಅಲ್ಯೂಮಿನಿಯಂ ಫಾಸ್ಫೈಡ್ ಮಾತ್ರೆ ಸೇರಿಸಿ ನಾಶಮಾಡಬಹುದು. ಜೇನು ಪೆಟ್ಟಿಗೆಯ ಪ್ರದೇಶ ದ್ವಾರವನ್ನು ಸಣ್ಣದಾಗಿಸಬೇಕು ಮತ್ತು ಜೇನು ಕುಟುಂಬಗಳನ್ನು ಬಲಿಷ್ಠವಾಗಿಟ್ಟುಕೊಳ್ಳುವ ಮೂಲಕ ಕಡಜ ಹಾಗೂ ಇತರ ಕೀಟ ರೋಗಗಳನ್ನು ನಿಯಂತ್ರಿಸಬಹುದು.

| ಡಾ. ಕೆ.ಟಿ. ವಿಜಯಕುಮಾರ್ ಜೇನುಕೃಷಿ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕೃಷಿ ವಿವಿಯಿಂದ ಕೊಡಮಾಡುವ ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

19-06-2023
Prajavani Pg 10

ಬೆಂಗಳೂರು: ನಗರದ ಕೃಷಿ ವಿಶ್ವವಿದ್ಯಾಲಯವು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯಮಟ್ಟದ ಪ್ರಶಸ್ತಿಗಳಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ/ ರೈತ ಮಹಿಳೆ ಪ್ರಶಸ್ತಿ ಹಾಗೂ ಡಾ.ಎಂ.ಎಚ್. ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ/ರೈತ ಮಹಿಳೆ ಪ್ರಶಸ್ತಿಗೆ ರಾಜ್ಯವ್ಯಾಪಿ ಇರುವ ರೈತರು ಅರ್ಜಿ ಸಲ್ಲಿಸಬಹುದಾಗಿದೆ. ಬೆಂಗಳೂರು ಕೃಷಿ ವಿವಿ ಆಡಳಿತ ವ್ಯಾಪ್ತಿಯಲ್ಲಿನ 10 ಜಿಲ್ಲೆಯವರು ರಾಜ್ಯಮಟ್ಟದ ಕೆನರಾ ಬ್ಯಾಂಕ್ ಪ್ರಯೋಜಿತ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ, ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ/ ರೈತ ಮಹಿಳೆ ಪ್ರಶಸ್ತಿ ಹಾಗೂ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅದೇ ರೀತಿ ಬೆಂಗಳೂರು ವ್ಯಾಪ್ತಿಯ 10 ಜಿಲ್ಲೆಯವರು ಜಿಲ್ಲಾಮಟ್ಟದ ಪ್ರಶಸ್ತಿಗಳಾದ ಜಿಲ್ಲಾಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಜಿಲ್ಲಾಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಹಾಗೂ ತಾಲೂಕು ಮಟ್ಟದ ಪ್ರಶಸ್ತಿಗಳಾದ ತಾಲೂಕು ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ತಾಲೂಕು ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತರು ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿ, ವಿಸ್ತರಣಾ ನಿರ್ದೇಶಕರ ಕಚೇರಿ, ಜಿಕೆವಿಕೆ, ಕೃಷಿ ವಿಜ್ಞಾನ ಕೇಂದ್ರಗಳು(ಹಾಡೋನಹಳ್ಳಿ-ದೊಡ್ಡಬಳ್ಳಾಪುರ, ಚಂದುರಾಯನಹಳ್ಳಿ-ಮಾಗಡಿ, ಕಂದಲಿ-ಹಾಸನ, ಕೊನೇಹಳ್ಳಿ-ತಿಪಟೂರು, ವಿ.ಸಿ.ಫಾರಂ-ಮಂಡ್ಯ, ಕುರುಬೂರು ಫಾರಂ-ಚಿಂತಾಮಣಿ ಮತ್ತು ಹರದನಹಳ್ಳಿ-ಚಾಮರಾಜನಗರ), ವಿಸ್ತರಣಾ ಶಿಕ್ಷಣ ಘಟಕ(ನಾಗನಹಳ್ಳಿ-ಮೈಸೂರು)ದಲ್ಲಿ ಅಥವಾ www.uasbangalore.edu.in ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಪಡೆದು, ಜು.31 ರೊಳಗಾಗಿ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ತಿಳಿಸಿದ್ದಾರೆ.

ಈ ಪ್ರಶಸ್ತಿಗಳನ್ನು ಕೃಷಿ ವಿವಿಯು ಅಕ್ಟೋಬರ್‌ನಲ್ಲಿ ಆಯೋಜಿಸಲಿರುವ ಕೃಷಿ ಮೇಳ-2023ರ ವೇಳೆ ಪ್ರದಾನ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಸ್ತರಣಾ ನಿರ್ದೇಶಕರ ಕಚೇರಿ, ಕೃಷಿ ವಿವಿ, ಜಿಕೆವಿಕೆ, ಬೆಂಗಳೂರು-65 ಅಥವಾ 080-23330153 ಸಂಪರ್ಕಿಸಬಹುದಾಗಿದೆ.

19-06-2023
Hindu Pg 02

Applications invited

The Hindu Bureau
BENGALURU

The University of Agricultural Sciences, Bangalore, has invited applications for the Best Farmer / Farm women and Best Extension worker State-level, district-level and taluk-level awards.

According to a UAS-B release, the application forms can be obtained from the office of the Joint Directors of Agriculture of respective districts or Krishi Vigyan Kendras (Hadonahalli-Doddaballapur, Chandurayanahalli-Magadi, Kandali-Hassan, Konehalli-Tiptur, V.C. Farm-Mandya, Kurubur Farm-Chitamani and Haradanahalli-Chamarajanagar.

The applications can also be downloaded from the university website www.uasbangalore.edu.in. The last date for submitting applications is July 31, 2023. For details, contact the office of the Director of Extension, UAS, GKVK campus, Bengaluru or call 080-23330153.

ಕೃಷಿ ವಿವಿಯಿಂದ ರೈತ ಪ್ರಶಸ್ತಿಗೆ ಅರ್ಜಿ ಆಹ್ವಾನ

18-06-2023
Sanjevani Pg 03

ಬೆಂಗಳೂರು,ಜೂ.18-ಕೃಷಿ ವಿಶ್ವವಿದ್ಯಾನಿಲಯವು ರಾಜ್ಯ,ಜಿಲ್ಲಾ ಹಾಗೂ ತಾಲೂಕು ಮಟ್ಟದ ರೈತ ಹಾಗೂ ರೈತ ಮಹಿಳೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.ಅಕ್ಟೋಬರ್ ತಿಂಗಳಲ್ಲಿನಡೆಯಲಿರುವ ಕೃಷಿಮೇಳ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ವಿತರಣೆ ಮಾಡಲಾಗುತ್ತದೆ.

ನಿಗದಿತ ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ, ಕೃಷಿ ನಿರ್ದೇಶಕರ ಕಚೇರಿ, ವಿಸ್ತರಣಾ ನಿರ್ದೇಶಕರ ಕಚೇರಿ,ಬೆಂಗಳೂರು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ದೊರೆಯುತ್ತದೆ. ಇದರ ಹೊರತಾಗಿಯೂ ಅರ್ಜಿಗಳು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವೆಬ್‌ಸೈಟ್‌ನಲ್ಲೂ (WWWHusbangalore.edu.in) ಲಭ್ಯವಿರುತ್ತದೆ. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಜುಲೈ 31ರವರೆಗೂ ಇರಲಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ. 18-2333153 ಸಂಪರ್ಕಿಸಬಹುದಾಗಿದೆ.

ಪ್ರಶಸ್ತಿಗಳ ವಿವರ

ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ / ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಹೆಚ್-ಮರಿಗೌಡರು ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ / ರೈತ ಮಹಿಳೆ ಪ್ರಶಸ್ತಿ, ಕೆನರಾ ಬ್ಯಾಂಕ್ ಪ್ರಯೋಜಿತ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ. ಆರ್. ದ್ವಾರಕಿನಾಥ್ ಅತ್ಯುತ್ತಮ ರೈತ ವಾಹಿಗೆ ಪ್ರಶಸ್ತಿ ಮತ್ತು ರೈತ ಮಹಿಳೆ ಪ್ರಶಸ್ತಿ, ಡಾ.ಆರ್. ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ, ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಪ್ರಶಸ್ತಿ, ತಾಲೂಕು ಮಟ್ಟದ ಅತ್ಯುತ್ತಮ ಯುವ ರೈತ ಮಹಿಳೆ ಪ್ರಶಸ್ತಿ

ವಿತ್ತವಾಣಿ
vittasuggi@gmail.com
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ
19 ಜೂನ್ 2023
19 JUNE 2023
4

ಮಲೆನಾಡಿನ ಜೇನಿಗೆ ಸಾಕಷ್ಟು ಬೇಡಿಕೆ ಇದ್ದು, ಜೇನು ಸಹಕಾರ ಸಂಘ ವಾರ್ಷಿಕವಾಗಿ 3 ಕೋಟಿ ರೂ., ಗೂ ಅಧಿಕ ವಹಿವಾಟು ನಡೆಸುತ್ತಿದೆ. ಸ್ಥಳೀಯವಾಗಿ ಬೇಡಿಕೆಗೆ ತಕ್ಕಂತೆ ಜೇನು ಉತ್ಪಾದನೆಯಾಗದ ಕಾರಣ ಬಿಹಾರ, ಜಾರ್ಖಂಡ್ ಹಾಗೂ ರಾಜ್ಯದ ವಿವಿಧೆಡೆಯಿಂದ ಜೇನು ತರಿಸಿ ಮಾರಲಾಗುತ್ತಿದೆ.



ಕಹಿಯಾದ ಜೇನು ಕೃಷಿ

ಬದಲಾದ ಕೃಷಿ ಪದ್ಧತಿ ಕಾರಣ

ಹೊರ ರಾಜ್ಯದಿಂದ ಆಮದು

ಕಾಂತರಾಜ್ ಹೊನ್ನೇಕೋಡಿ ಸಕಲೇಶಪುರ

ಮಲೆನಾಡಿನಲ್ಲಿ ಜೇನುಕೃಷಿ ಅವನತಿಗೆ ಬದಲಾದ ಕೃಷಿ ಪದ್ಧತಿ ಕಾರಣ ಎಂಬ ಮಾತುಗಳು ಕೇಳಿಬರುತ್ತಿವೆ. 90ರ ದಶಕದ ನಂತರ ಕಾಫಿ ಬೆಳೆ ಮುಕ್ತ ಮಾರುಕಟ್ಟೆಗೆ ತೆರೆದುಕೊಂಡ ಬಳಿಕ ಹಾಗೂ 2000-01ರ ವೇಳೆಗೆ ಕಾಳುಮೆಣಸಿನ ಧಾರಣೆ ವಿಪರೀತ ಏರಿಕೆ ಕಂಡ ಪರಿಣಾಮ ಬಹುತೇಕ ಕಾಫಿ ಹಾಗೂ ಮೆಣಸಿನ ಬಳ್ಳಿ ಬೆಳೆಯುವ ವಿಧಾನ ಸಾಂಪ್ರದಾಯಿಕತೆಯಿಂದ ಬದಲಾವಣೆಗೊಂಡು ಆಧುನಿಕತೆ ಪಡೆಯಿತು. ಹೆಚ್ಚು ಫಸಲು ಉತ್ಪಾದನೆ ಸ್ಪರ್ಧೆಗೆ ಬಿದ್ದಿರುವ ಬೆಳೆಗಾರರು ವಾರ್ಷಿಕವಾಗಿ ಕಾಫಿಗೆ ಎರಡರಿಂದ ಮೂರು ಬಾರಿ ಹಾಗೂ ಮೆಣಸಿನ ಬಳ್ಳಿಗಳಿಗೆ ನಾಲ್ಕರಿಂದ ಐದು ಬಾರಿ ಔಷಧ ಸಿಂಪಡಣೆ ಮಾಡುತ್ತಿದ್ದಾರೆ. ಇದು ಜೇನುಹುಳುಗಳಿಗೆ ಕಂಟಕವಾಗಿ ಪರಿಣಮಿಸಿದೆ. ಪರಿಣಾಮ, ಭಾರಿ ಪ್ರಮಾಣದಲ್ಲಿ ಜೇನುಕೃಷಿ ಮೂರು ಜಿಲ್ಲೆಗಳಲ್ಲಿ ಬಹುತೇಕ ನೆಲಕಚ್ಚಿದೆ.

ಹೊರರಾಜ್ಯದಿಂದ ಆಮದು: ಮಲೆನಾಡಿನ ಜೇನು ಪರಿಶುದ್ಧ ಎಂಬ ನಂಬಿಕೆ ರಾಜ್ಯದ ಜನರಲ್ಲಿರುವುದರಿಂದ ಸಾಕಷ್ಟು ಬೇಡಿಕೆ ಇದ್ದು, ಜೇನು ಸಹಕಾರ ಸಂಘ ವಾರ್ಷಿಕವಾಗಿ 3 ಕೋಟಿ ರೂ., ಗೂ ಅಧಿಕ ವಹಿವಾಟು ನಡೆಸುತ್ತಿದೆ. ಆದರೆ, ಸ್ಥಳೀಯವಾಗಿ ಜೇನು ಉತ್ಪಾದನೆಯಾಗದ ಕಾರಣ ಬಿಹಾರ, ಜಾರ್ಖಂಡ್ ಹಾಗೂ ರಾಜ್ಯದ ವಿವಿಧೆಡೆಯಿಂದ ಜೇನು ತರಿಸಿ ಮಾರಲಾಗುತ್ತಿದೆ.

ಉತ್ತರ ಭಾರತದಲ್ಲಿ ಉದ್ಯಮ: ಉತ್ತರ ಭಾರತದಲ್ಲಿ ಜೇನು ಕೃಷಿ ಉದ್ಯಮದ ರೂಪ ಪಡೆದಿದೆ. ವಾರ್ಷಿಕ ಮೂರರಿಂದ ನಾಲ್ಕು ಬಾರಿ ಜೇನು ಕೊಯ್ಲು ನಡೆಸುವ ಪ್ರತಿ ಕುಟುಂಬ ಕನಿಷ್ಠ 100 ರಿಂದ 1 ಸಾವಿರ ಜೇನುಪೆಟ್ಟಿಗೆಗಳ ಮೂಲಕ ಜೇನು ಉತ್ಪಾದಿಸುತ್ತಿದೆ. ಅಲ್ಲಿನ ಜೇನು ಕೃಷಿಕರು ಇಟಲಿಯಿಂದ ಆಮದು ಮಾಡಿಕೊಂಡಿರುವ ಮೇಲ್ಲಿಪ್ಯಾರ ಎಂಬ ಜೇನಿನ ಹುಳುಗಳಿಂದ ಜೇನು ಉತ್ಪಾದಿಸುತ್ತಿದ್ದಾರೆ. ಮಲೆನಾಡಿನ ಜೇನು ಹುಳುಗಳಿಗೆ ಹೋಲಿಸಿದಲ್ಲಿ ದೊಡ್ಡ ಗಾತ್ರದಲ್ಲಿರುವ ಈ ತಳಿಯ ಜೇನುಹುಳುಗಳು ಪ್ರತಿ ಗೂಡಿನಲ್ಲಿ ಕನಿಷ್ಠ 40 ರಿಂದ 50 ಸಾವಿರ ಸಂಖ್ಯೆಯಲ್ಲಿವೆ. ಕನಿಷ್ಠ ಈ ಗೂಡಿನಿಂದ ಪ್ರತಿ ಕೊಯ್ಲಿಗೆ 10 ರಿಂದ 30 ಕೆಜಿ ಜೇನು ಉತ್ಪಾದನೆಯಾಗುತ್ತದೆ. ಆದರೆ, ಮಲೆನಾಡಿನಲ್ಲಿ ಸರೇನಾ ಇಂಡಿಕಾ ಎಂಬ ದೇಸಿ ತಳಿಯ ಜೇನುಹುಳುಗಳಿದ್ದು, ಈ ಜೇನುಗೂಡಿನಲ್ಲಿ 7 ರಿಂದ 10 ಸಾವಿರ ಹುಳುಗಳಿರುತ್ತವೆ. ಪ್ರತಿ ಕೊಯ್ಲಿಗೆ 1 ರಿಂದ 4 ಕೆಜಿ ಜೇನು ಉತ್ಪಾದನೆಯಾಗುತ್ತದೆ. ದೇಸಿ ತಳಿಯ ಜೇನುಹುಳುಗಳ ಉತ್ಪಾದನೆ ಸಾಮರ್ಥ್ಯ ಕಡಿಮೆ ಇರುವುದು ಸಹ ಜೇನು ಕೃಷಿಕರ ನಿರಾಸಕ್ತಿಗೆ ಕಾರಣ ಎನ್ನಲಾಗುತ್ತಿದೆ.



ಕಲುಷಿತ ದಂಧೆ

ಮಲೆನಾಡಿಗೆ ಬರುವ ಪ್ರವಾಸಿಗರು ಸಾಮಾನ್ಯವಾಗಿ ಜೇನು ಖರೀದಿಸುವುದು ವಾಡಿಕೆ. ಇವರಿಗೆ ಬೀದಿ ಬದಿ ಹಾಗೂ ಬಹುತೇಕ ಅಂಗಡಿ ಮಾಲೀಕರು ಪರಿಶುದ್ಧ ಜೇನು ಎಂದು ಹೇಳಿ ಸಕ್ಕರೆ ನೀರು ಮಿಶ್ರಿತ ಜೇನು ಹಾಗೂ ಸಕ್ಕರೆ ಪಾಕವನ್ನೇ ಜೇನು ಎಂದು ನಂಬಿಸಿ ಮಾರಿ ವಂಚಿಸುತ್ತಿದ್ದಾರೆ. ಕೆಲವು ಬುಡಕಟ್ಟು ಜನಾಂಗದ ಜನರು ಜೇನಿನ ಅರಿಗಳಿಗೆ ಸಕ್ಕರೆ ಪಾಕ ಹಾಕಿ ಶುದ್ಧ ಜೇನು ಎಂದು ಮಾರಾಟ ಮಾಡುತ್ತಿದ್ದು ಈ ದಂಧೆ ಇದೀಗ ವ್ಯಾಪಕವಾಗಿದೆ.

ಮಲೆನಾಡಿನಲ್ಲಿ ಕಂಡುಬರುವ ಜೇನು

ಹೆಜ್ಜೇನು, ಕೋಲುಜೇನು, ಹುತ್ತದ ಜೇನು, ತಡುವೆ ಜೇನು, ಮಿಷರಿ ಕುರುಡ ಜೇನುಗಳು ಮಲೆನಾಡಿನಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮಿಷರಿ ಕುರುಡ ಜೇನನ್ನು ವಾರ್ಷಿಕವಾಗಿ ಒಮ್ಮೆ ಕೊಯ್ಲು ನಡೆಸಲಾಗುತ್ತಿದ್ದು, ಪ್ರತಿ ಕೆಜಿಗೆ 3 ರಿಂದ 4 ಸಾವಿರ ರೂ. ವರೆಗೆ ಧಾರಣೆ ಇದೆ. ಆದರೆ, ಉಳಿದೆಲ್ಲ ಜೇನಿನ ಬೆಲೆ 200-400 ರೂ. ಇದೆ.

ಸಹಕಾರ ಸಂಘ ಸ್ಥಾಪನೆ

1930-40ರ ದಶಕದಲ್ಲಿ ಕೊಡಗು, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದ್ದ ಜೇನಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ 1940ರಲ್ಲಿ ಮೂರು ಜಿಲ್ಲೆಗಳನ್ನು ಒಳಗೊಂಡಂತೆ ಸಕಲೇಶಪುರ ಪಟ್ಟಣದಲ್ಲಿ ಜೇನು ಮಾರುಕಟ್ಟೆ ಸಹಕಾರ ಸಂಘ ಸ್ಥಾಪಿಸಲಾಗಿತ್ತು. ಆ ಮೂಲಕ ಸ್ಥಳೀಯ ಉತ್ಪಾದಕರಿಂದ ಜೇನು ಖರೀದಿಸಿ ರಾಜ್ಯದ ವಿವಿಧೆಡೆ ಸೇರಿ ಅಂತಾರಾಜ್ಯಗಳಿಗೂ ಪೂರೈಸಲಾಗುತ್ತಿತ್ತು. ಇದರೊಂದಿಗೆ, ಜೇನು ಕೃಷಿ ಅಭಿವೃದ್ಧಿಗೆ ಅಗತ್ಯವಿದ್ದ ತರಬೇತಿ, ಪ್ರಾತ್ಯಕ್ಷಿಕೆ, ಸಾಲ ಸೌಲಭ್ಯ, ಜೇನುಪೆಟ್ಟಿಗೆ ಒದಗಿಸುವ ಕೆಲಸ ಮಾಡಲಾಗುತ್ತಿತ್ತು. ಹೀಗಾಗಿ, ಕರ್ನಾಟಕದಲ್ಲಿ ಮಲೆನಾಡು ಜೇನಿನ ತವರು ಎಂದೇ ಕರೆಸಿಕೊಳ್ಳುತ್ತಿತ್ತು. ಈ ಮಾತು 90ರ ದಶಕದವರೆಗೂ ಮುಂದುವರಿದಿತ್ತು. ಆದರೆ, ನಂತರದ ವರ್ಷಗಳಲ್ಲಿ ಜೇನು ಕೃಷಿಗೆ ಎಷ್ಟೇ ಉತ್ತೇಜನ ನೀಡಿದರೂ ಸ್ಥಳೀಯವಾಗಿ ಜೇನು ಉತ್ಪಾದನೆ ಕಡಿಮೆಯಾಗಿದೆ. ಪರಿಣಾಮ, ಮಾರುಕಟ್ಟೆಗೆ ಸ್ಥಳೀಯ ಜೇನು ಪೂರೈಕೆಯಾಗದೆ ಉತ್ತರ ಭಾರತದಿಂದ ಜೇನು ಖರೀದಿಸಿ ಗ್ರಾಹಕರಿಗೆ ತಲುಪಿಸುವ ಕಾರ್ಯವನ್ನು ಜೇನು ಮಾರಾಟ ಸಹಕಾರ ಸಂಘ ಮಾಡುತ್ತಿದೆ.



ಸಕಲೇಶಪುರ ಪಟ್ಟಣದ ಜೇನು ಮಾರಾಟ ಸಹಕಾರ ಸಂಘ.

ಆಸಕ್ತಿ ಹೆಚ್ಚುತ್ತಿದೆ

ಕಳೆದ ಎರಡು ದಶಕದಿಂದ ಬಹುತೇಕ ಜೇನು ಕೃಷಿಗೆ ಮಲೆನಾಡಿಗರು ಹಿಂದಿರುಗಿದ್ದಾರೆ. ಯುವ ಹಾಗೂ ಪ್ರಗತಿಪರ ರೈತರು ಜೇನು ಕೃಷಿ ಆರಂಭಿಸಿದ್ದು, ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದಾರೆ.



ಮಾನದಂಡ ಬದಲಾಗಲಿ

ಜೇನು ಕೃಷಿ ಉತ್ತೇಜನಕ್ಕೆ ರಾಜ್ಯ ಸರ್ಕಾರ 'ಮಧುವನ' ಯೋಜನೆ ಮೂಲಕ 500 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಜೇನು ಕೃಷಿ ಅಭಿವೃದ್ಧಿ ಹೊಣೆಯನ್ನು ತೋಟಗಾರಿಕೆ ಇಲಾಖೆಗೆ ವಹಿಸಲಾಗಿದೆ. ಆದರೆ, ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ಯೋಜನೆ ಫಲಪ್ರದವಾಗಿಲ್ಲ. ಜೇನು ಉತ್ಪಾದನೆಗೆ ಹೆಚ್ಚಿನ ಅವಕಾಶವಿರುವ ಕೊಡಗು, ಚಿಕ್ಕಮಗಳೂರು ಹಾಗೂ ಸಕಲೇಶಪುರದಲ್ಲಿ ಸರ್ಕಾರದ ಈ ಯೋಜನೆಯನ್ನು ತೋಟಗಾರಿಕೆ ಇಲಾಖೆ ಬದಲಾಗಿ ಜೇನು ಮಾರಾಟ ಸಹಕಾರ ಸಂಘಕ್ಕೆ ವಹಿಸಿದರೆ ಉತ್ತಮ ಎಂಬ ಅಭಿಪ್ರಾಯ ಜೇನು ಕೃಷಿಕರಿಂದ ಕೇಳಿಬರುತ್ತಿದೆ.

> **ಜೇ**ನು ಕೃಷಿ ಹೆಚ್ಚಿನ ಲಾಭದಾಯಕ ಉದ್ಯಮವಾಗಿದೆ. ಇದಕ್ಕೆ ಸರ್ಕಾರ ಹೆಚ್ಚಿನ ಉತ್ತೇಜನ ನೀಡಿದಲ್ಲಿ ಸಕ್ಕರೆ ಬದಲಿಗೆ ಜೇನನ್ನು ಮನೆಯಲ್ಲಿ ಬಳಸುವಂತೆ ಮನವೊಲಿಸಬಹುದು. ಸಂಘದ ಮೂಲಕ ಸ್ಥಳೀಯವಾಗಿ ಜೇನು ಉತ್ಪಾದನೆಗೆ ರಿಯಾಯಿತಿ ಮೂಲಕ ಹಲವು ಸೌಲಭ್ಯ ಕಲ್ಪಿಸುತ್ತಿದ್ದೇವೆ.
>
> | **ಜೈ ಮಾರುತಿ ದೇವರಾಜ್** ಅಧ್ಯಕ್ಷ, ಜೇನು ಮಾರಾಟ ಸಹಕಾರ ಸಂಘ, ಸಕಲೇಶಪುರ

> **ಇ**ತ್ತೀಚಿನ ವರ್ಷಗಳಲ್ಲಿ ಜೇನು ಕೃಷಿ ಬಗ್ಗೆ ಆಸಕ್ತಿ ಹೆಚ್ಚುತ್ತಿರುವುದು ಉತ್ತಮ ಬೆಳವಣಿಗೆ. ಸರ್ಕಾರ ಮಲೆನಾಡಿನಲ್ಲಿ ಜೇನು ಕೃಷಿ ಉತ್ತೇಜನಕ್ಕೆ ಇನ್ನಷ್ಟು ಯೋಜನೆಗಳನ್ನು ಹಮ್ಮಿಕೊಳ್ಳಬೇಕಿದೆ.
>
> | **ಸತೀಶ್** ಸಿಇಒ, ಜೇನು ಮಾರಾಟ ಸಹಕಾರ ಸಂಘ, ಸಕಲೇಶಪುರ

₹2 ಸಾವಿರದ ನೋಟು ವಿಲೇವಾರಿಗೆ ತರಾತುರಿ

ಅಡಿಕೆ ಧಾರಣೆ ಕೃತಕ ಏರಿಕೆ

ಪ್ರಜಾವಾಣಿ ವಾರ್ತೆ

ಶಿರಸಿ: 'ಮಾರುಕಟ್ಟೆಯಲ್ಲಿ ಇರುವ ದರಕ್ಕಿಂತ ಹೆಚ್ಚಿನ ದರ ನಿಮ್ಮ ಅಡಿಕೆಗೆ ಕೊಡ್ತೇವೆ. ಆದರೆ ₹2 ಸಾವಿರದ ನೋಟು ತಗೋಬೇಕು...'

ಇದು ಸದ್ಯಕ್ಕೆ ಏರುಹಾದಿಯಲ್ಲಿ ಇರುವ ಅಡಿಕೆ ಮಾರುಕಟ್ಟೆಯಲ್ಲಿ ಬೆಳೆಗಾರರ ಎದುರು ವರ್ತಕರು ಹಾಗೂ ಮಧ್ಯವರ್ತಿಗಳು ಇಡುತ್ತಿರುವ ಬೇಡಿಕೆ!

ವರ್ಷದ ನಂತರ ಚಾಲಿ ಅಡಿಕೆ ಹಾಗೂ ರಾಶಿ ಅಡಿಕೆ ದರ ಏರಿಕೆ ಕಾಣುತ್ತಿದೆ. ತಿಂಗಳೇಟಿಗೆ ಕ್ವಿಂಟಲ್ ಅಡಿಕೆಗೆ ₹2 ಸಾವಿರದಿಂದ ₹3 ಸಾವಿರದಷ್ಟು ದರ ಏರಿಕೆಯಾಗಿದೆ. ಏಪ್ರಿಲ್-ಮೇ ತಿಂಗಳಿನಲ್ಲಿ ರಾಶಿ ದರ ಕ್ವಿಂಟಲ್‌ಗೆ ಗರಿಷ್ಠ ₹45-₹47 ಸಾವಿರ ಆಸುಪಾಸು ಇತ್ತು. ಆದರೆ ಈಗ ರಾಶಿ ಅಡಿಕೆ ದರ ಕ್ವಿಂಟಲ್‌ಗೆ ₹50 ಸಾವಿರ ದಾಟಿದೆ.



ಶಿರಸಿ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಂದ ಅಡಿಕೆ

ಚಾಲಿ ದರದಲ್ಲಿಯೂ ಏರಿಕೆಯಾಗಿದ್ದು, ಏಪ್ರಿಲ್, ಮೇ ತಿಂಗಳಿನಲ್ಲಿ ₹35-₹37 ಸಾವಿರ ಇದ್ದ ದರವು ಈಗ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹40 ಸಾವಿರದ ಗಡಿ ದಾಟಿದೆ. ಕೆಲವು ವರ್ತಕರ ವಲಯದಲ್ಲಿ ಈ ದರ ಇನ್ನಷ್ಟು ಹೆಚ್ಚಿದೆ.

₹2 ಸಾವಿರ ಮುಖಬೆಲೆಯ ನೋಟುಗಳನ್ನು ಬ್ಯಾಂಕ್‌ಗಳಿಗೆ ಮರಳಿಸಲು ಅಥವಾ ವಿನಿಮಯ ಮಾಡಿಕೊಳ್ಳಲು ಸರ್ಕಾರ ಗಡುವು ನೀಡಿರುವುದೇ ಇದಕ್ಕೆ ಕಾರಣ ಎಂಬ ಮಾತು ಈ ಭಾಗದಲ್ಲಿ ಚಾಲ್ತಿಯಲ್ಲಿದೆ.

> **ಅಡಿಕೆ ಖರೀದಿಸಲು ಕೆಲವು ವರ್ತಕರು ₹2 ಸಾವಿರದ ನೋಟುಗಳನ್ನೇ ಕೊಡುತ್ತಿದ್ದಾರೆ. ಹಾಗಾಗಿ ಈಗಿನ ಅಡಿಕೆ ದರ ಏರಿಕೆ ತಾತ್ಕಾಲಿಕ**
>
> **ರವೀಶ ಹೆಗಡೆ,** ಪ್ರಧಾನ ವ್ಯವಸ್ಥಾಪಕ, ಟಿಎಸ್‌ಎಸ್ ಸಂಸ್ಥೆ

ಶಿರಸಿ ಮಾರುಕಟ್ಟೆಗೆ ಬರುವ ಅಡಿಕೆಯಲ್ಲಿ ಶೇ 40ರಷ್ಟನ್ನು ಸಹಕಾರ ಸಂಘಗಳು ಖರೀದಿಸುತ್ತವೆ. ಇನ್ನುಳಿದ ಪಾಲನ್ನು ಇತರ ವರ್ತಕರು ಖರೀದಿಸುತ್ತಿದ್ದಾರೆ.

'₹2 ಸಾವಿರ ಮುಖಬೆಲೆಯ ನೋಟನ್ನು ತಮ್ಮಿಂದ ಖಾಲಿ ಮಾಡಿಕೊಳ್ಳಲು ವರ್ತಕರು 'ಹೆಚ್ಚಿನ ದರ'ದ ತಂತ್ರ ಅನುಸರಿಸುತ್ತಿದ್ದಾರೆ. ₹2 ಸಾವಿರದ ನೋಟು ಪಡೆಯುವುದಾದರೆ ಅಡಿಕೆಗೆ ಮಾರುಕಟ್ಟೆ ದರಕ್ಕಿಂತ ₹500ರಿಂದ ₹1 ಸಾವಿರದವರೆಗೆ ಹೆಚ್ಚು ನೀಡುವುದಾಗಿ ಹೇಳುತ್ತಿದ್ದಾರೆ' ಎಂಬುದು ಮಾರುಕಟ್ಟೆ ತಜ್ಞರ ಹೇಳಿಕೆ.

18-06-2023
Prjavani Pg 10

ರಾಜ್ಯದಲ್ಲಿ ಶೇ.10 ಬಿತ್ತನೆಯೂ ಆಗಿಲ್ಲ | ಬೆಳೆದ ಫಸಲಿಗೆ ನೀರಿಲ್ಲದೆ ಸಂಕಷ್ಟ

ಮಳೆ ನಿರೀಕ್ಷೆಯಲ್ಲಿ ಸೊರಗಿದ ಕೃಷಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಈ ಸಲ ಮುಂಗಾರು ವಾಡಿಕೆಗಿಂತ ತಡವಾಗಿ ರಾಜ್ಯಕ್ಕೆ ಆಗಮಿಸಿ ಆರಂಭದಲ್ಲೇ ದುರ್ಬಲಗೊಂಡ ಪರಿಣಾಮ ಇನ್ನೂ ಕೃಷಿ ಚಟುವಟಿಕೆಗಳು ಆರಂಭವಾಗಿಲ್ಲ ಅಥವಾ ಕುಂಠಿತಗೊಂಡಿವೆ. ಮೇನಲ್ಲಿ ಅಲ್ಪಸ್ವಲ್ಪ ಬಿದ್ದ ಮುಂಗಾರುಪೂರ್ವ ಮಳೆಯಿಂದಾಗಿ ಜಮೀನು ಹದಗೊಳಿಸಿದ್ದ ರೈತರು ಪ್ರಸಕ್ತ ತಿಂಗಳ ಮೊದಲ ವಾರದಲ್ಲಿ ಬಿತ್ತನೆ ಕಾರ್ಯ ನಡೆಸಿದ್ದರು. ಇನ್ನೂ ಮಳೆಯಾಗದ ಹಿನ್ನೆಲೆ ಬೆಳೆಗಳನ್ನು ಉಳಿಸಿಕೊಳ್ಳುವುದು ಹೇಗೆ ಎಂಬ ಚಿಂತೆಯಲ್ಲಿದ್ದಾರೆ. ಈ ನಡುವೆ, ಸೋಮವಾರದಿಂದ ಮಳೆ ಚುರುಕಾಗಬಹುದೆಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ರೈತರ ಚಿತ್ತ ಆಗಸದತ್ತ ನೆಟ್ಟಿದೆ.



ಈ ವಾರ ಮಳೆಯಾಗುವ ನಿರೀಕ್ಷೆ ಇದೆ. ಒಂದು ವೇಳೆ ಮಳೆಯಾಗದಿದ್ದರೆ ಮೋಡ ಬಿತ್ತನೆ ಮಾಡುವ ಬಗ್ಗೆ ಚರ್ಚಿಸಿ ಕ್ರಮ ವಹಿಸಲಾಗುವುದು.

| ಎನ್. ಚೆಲುವರಾಯಸ್ವಾಮಿ
ಕೃಷಿ ಸಚಿವ

ಬೆಂಗಳೂರು ಗ್ರಾಮಾಂತರದಲ್ಲಿ ಮುಂಗಾರು ಹಂಗಾಮಿನಲ್ಲಿ 71,246 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಅಂದಾಜಿಸಲಾಗಿದೆ. 59,100 ಹೆಕ್ಟೇರ್‌ನಲ್ಲಿ ರಾಗಿ, 8,136 ಹೆಕ್ಟೇರ್ ಜೋಳ, 948 ಹೆಕ್ಟೇರ್ ತೊಗರಿ, 215 ನೆಲಗಡಲೆ ಬಿತ್ತನೆ ನಿರೀಕ್ಷಿಸಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಪ್ರಸ್ತುತ 1.54 ಲಕ್ಷ ಹೆಕ್ಟೇರ್ ಗುರಿಗೆ 152 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಬಹುತೇಕ ಕಡೆ ಅಂತರ್ಜಲ ಮಟ್ಟ ಕುಸಿದಿದ್ದು, ನೀರಿನ ಅಭಾವ ಎದುರಾಗುತ್ತಿದೆ.

ಕೋಲಾರದಲ್ಲಿ ಈ ಬಾರಿ ಮುಂಗಾರುಪೂರ್ವ ಮಳೆ ಉತ್ತಮವಾಗಿದೆ. 10,980 ಹೆಕ್ಟೇರ್‌ನಲ್ಲಿ ನೆಲಗಡಲೆ ಬಿತ್ತನೆ ಗುರಿ ಹೊಂದಲಾಗಿದೆ. ಆದರೆ, ಮಳೆ ಕೊರತೆಯಿಂದ 53 ಹೆಕ್ಟೇರ್‌ನಲ್ಲಿ ಮಾತ್ರ ನೆಲಗಡಲೆ, ಎಳ್ಳು ಬಿತ್ತನೆ ಮಾಡಲಾಗಿದೆ. ತುಮಕೂರಲ್ಲಿ ಮಳೆ ಅಭಾವದಿಂದಾಗಿ ಮುಂಗಾರಿಗೆ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದ್ದರೂ ಕೃಷಿ ಚಟುವಟಿಕೆ ಆರಂಭವಾಗಿಲ್ಲ. ರಾಮನಗರ ಜಿಲ್ಲೆ ಯಲ್ಲಿ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದ್ದರೂ ಕೃಷಿ ಚಟು ವಟಿಕೆ ಆರಂಭವಾಗಿಲ್ಲ. ◗ ಪುಟ 3



ಮೈಸೂರು ಜಿಲ್ಲೆಯಲ್ಲಿ ಮಳೆ ನಿರೀಕ್ಷೆಯಲ್ಲಿರುವ ಮುಂಗಾರು ಪೂರ್ವ ಬಿತ್ತನೆಯಾದ ಫಸಲು.



ವಿಜಯವಾಣಿ ಚಿತ್ರಸುದ್ದಿ

ಬೆಳಗಾವಿ ಜಿಲ್ಲೆ ಗಡಿ ಭಾಗದಲ್ಲಿ ಜಮೀನಿಗೆ ಟ್ಯಾಂಕರ್ ಮೂಲಕ ನೀರು ಹರಿಸುತ್ತಿರುವುದು.

ಬೀಜ ಖರೀದಿಗೆ ನಿರಾಸಕ್ತಿ

ರಾಯಚೂರಲ್ಲಿ ಬಿತ್ತನೆ ಕಾರ್ಯ ಆರಂಭವಾಗಿಲ್ಲ. 5.41 ಲಕ್ಷ ಹೆಕ್ಟೇರ್ ಪೈಕಿ ಶೇ.10 ಕೂಡ ಬಿತ್ತನೆಯಾಗಿಲ್ಲ. ಜಲಾಶಯದಿಂದ ನೀರು ಹರಿಸುವವರೆಗೆ ಭತ್ತ ನಾಟಿಯೂ ತಡವಾಗಲಿದೆ. ಜಿಲ್ಲೆಯ ಎಡಬಲದಲ್ಲಿ ನದಿಗಳು ಹರಿಯುತ್ತಿದ್ದರೂ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಂಕಷ್ಟ ತಲೆದೋರಿದೆ. ಬಳ್ಳಾರಿಯಲ್ಲೂ ಮುಂಗಾರು ಬಿತ್ತನೆ ಕುಂಠಿತಗೊಂಡಿದೆ. 1.73 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಮುಂಗಾರು ಪೂರ್ವದಲ್ಲಾದ ಮಳೆಯಿಂದಾಗಿ ಶೇ.10 ರೈತರು ಬಿತ್ತನೆ ಮಾಡಿದ್ದರು. ವಿಜಯನಗರದಲ್ಲಿ ಬಿತ್ತನೆ ಕಾರ್ಯ ಇನ್ನೂ ಆರಂಭಗೊಂಡಿಲ್ಲ. ಜಿಲ್ಲೆಯ 2.89 ಲಕ್ಷ ಹೆಕ್ಟರ್ ಬಿತ್ತನೆ ಗುರಿಯಲ್ಲಿ ಕೇವಲ 3,325 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಕೊಪ್ಪಳದಲ್ಲಿ ಮಳೆ ಕೊರತೆಯಿಂದ ಶೇ.25ರ ಬದಲು ಶೇ.11 ಬಿತ್ತನೆಯಾಗಿದೆ. ಪೂರ್ವ ಮುಂಗಾರಿನಲ್ಲಿ ಹೆಸರು ಬಿತ್ತನೆಯಾಗಿದ್ದು, ನೀರಿಲ್ಲದೆ ಒಣಗುತ್ತಿದೆ. ದಾವಣಗೆರೆಯಲ್ಲೂ ಬಿತ್ತನೆ ಕಾರ್ಯ ಶುರುವಾಗಿಲ್ಲ. ಜಿಲ್ಲೆಯಲ್ಲಿ ಈವರೆಗೆ ವಾಡಿಕೆಯಂತೆ 2.45 ಲಕ್ಷ ಹೆಕ್ಟೇರ್ ಬಿತ್ತನೆಯಾಗಬೇಕಿತ್ತು. ಆದರೆ, 1,134 ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ. ಚಿತ್ರದುರ್ಗದಲ್ಲಿ ಬಹುತೇಕ ಮಳೆಯಾಶ್ರಿತ ಕೃಷಿಯಾಗಿದ್ದು, ಈವರೆಗೂ ವರುಣ ಕೃಪೆ ತೋರಿಲ್ಲ. ಹೀಗಾಗಿ ಬಿತ್ತನೆ ಚಟುವಟಿಕೆಯಲ್ಲಿ ರೈತೋತ್ಸಾಹ ಕಂಡು ಬರುತ್ತಿಲ್ಲ. ಬೀಜ ಖರೀದಿಯಲ್ಲೂ ನಿರಾಸಕ್ತಿ ಕಂಡುಬಂದಿದೆ.

ಕೃಷಿ ಚಟುವಟಿಕೆ ಅತ್ಯಲ್ಪ

ಧಾರವಾಡದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಕೃಷಿ ಚಟುವಟಿಕೆಗಳು ನಡೆದಿವೆ. ಮುಂದಿನ ದಿನಗಳಲ್ಲಿ ಮಳೆ ಸುರಿಯದಿದ್ದರೆ ಬರಗಾಲ ಉಂಟಾಗಲಿದೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರ ಸೇರಿ ಜಿಲ್ಲೆಯ ವಿವಿಧೆಡೆಗೆ ಕುಡಿಯುವ ನೀರು ಪೂರೈಸುವ ಸವದತ್ತಿಯ ರೇಣುಕಾಸಾಗರ ಜಲಾಶಯದಲ್ಲಿ 4.5 ಟಿಎಂಸಿ ಅಡಿ ನೀರು ಸಂಗ್ರಹ ಇದ್ದು, ಸದ್ಯಕ್ಕೆ ಕೊರತೆ ಇಲ್ಲ. ಗ್ರಾಮಾಂತರದ ಕೆರೆಗಳಲ್ಲಿ ನೀರು ಕಡಿಮೆಯಾಗಿದೆ. ಹಾವೇರಿಯಲ್ಲಿ ಅಲ್ಪಸ್ವಲ್ಪ ಫಸಲು ಒಣಗುತ್ತಿದೆ. ಗದಗದಲ್ಲಿ ಕೃಷಿ ಚಟುವಟಿಕೆ ಸೊರಗಿದೆ. ವಿಜಯಪುರದಲ್ಲಿ ಇನ್ನೂ ಮಳೆಯಾಗಿಲ್ಲ. ಮಹಾರಾಷ್ಟ್ರದ ಕೃಷ್ಣಾ, ಭೀಮಾ ಜಲಾನಯನ ಪ್ರದೇಶದಲ್ಲೂ ಮಳೆಯಾಗದೆ ನದಿಗಳ ಒಡಲು ಬರಿದಾಗಿದೆ. ಆಲಮಟ್ಟಿ ಜಲಾಶಯದಲ್ಲಿ ನೀರಿನ ಮಟ್ಟ ಕ್ಷೀಣಿಸುತ್ತಿದೆ. ಜಮೀನಿನಲ್ಲಿರುವ ಕಬ್ಬು ಮತ್ತಿತರ ದೀರ್ಘಾವಧಿ ಬೆಳೆಗಳು ಒಣಗುತ್ತಿವೆ. ಬಾಗಲಕೋಟೆಯಲ್ಲಿ ಕೃಷಿ ಚಟುವಟಿಕೆಗೆ ಭಾರಿ ಹಿನ್ನಡೆಯಾಗಿದೆ. ಜಿಲ್ಲೆಯಲ್ಲಿ 2.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರಿನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ವಾಣಿಜ್ಯ ಬೆಳೆ ಕಬ್ಬು ಸೇರಿದಂತೆ ಹೆಸರು, ಸೋಯಾ ಬೀನ್, ಉದ್ದು, ಗೋವಿನಜೋಳ, ತೊಗರಿ, ಮುಂಗಾರು ಜೋಳದ ಬೆಳೆಗಳನ್ನು ಬೆಳೆಯಲಾಗುತ್ತದೆ. ಮಳೆಯಾಶ್ರಿತವಷ್ಟೇ ಅಲ್ಲದೆ ನೀರಾವರಿ ಪ್ರದೇಶದಲ್ಲೂ ಮಳೆ ವಿಳಂಬದಿಂದಾಗಿ ಬಿತ್ತನೆ ಚಟುವಟಿಕೆ ನಡೆದಿಲ್ಲ.

ಇಂದಿನಿಂದ ರಾಜ್ಯದೆಲ್ಲೆಡೆ ಉತ್ತಮ ಮಳೆ ಸಾಧ್ಯತೆ

ಬೆಂಗಳೂರು: ದುರ್ಬಲವಾಗಿಯೇ ಮುಂದುವರಿದಿರುವ ಮುಂಗಾರು ಕಾರಣದಿಂದ ಪ್ರಸಕ್ತ ತಿಂಗಳಲ್ಲಿ ಭಾರಿ ಮಳೆ ಕೊರತೆಯಾಗಿದೆ. ಜೂ.1ರಿಂದ 18ರವರೆಗೆ ರಾಜ್ಯಾದ್ಯಂತ ವಾಡಿಕೆಯಂತೆ 109 ಮಿಮೀ ಮಳೆ ಆಗಬೇಕಿತ್ತು. ಆದರೆ, 32 ಮಿಮೀ ಮಳೆಯಾಗಿದ್ದು, ಶೇ.71 ಕಡಿಮೆಯಾಗಿದೆ. ಸೋಮವಾರದಿಂದ (ಜೂ.19) ರಾಜ್ಯದಲ್ಲಿ ಮಳೆ ಚುರುಕುಗೊಳ್ಳುವ ನಿರೀಕ್ಷೆಯಿದೆ. ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಏಳು ದಿನಗಳ ಕಾಲ ಉತ್ತಮ ಮಳೆಯಾಗುವ ಸಾಧ್ಯತೆ ಇದೆ. ಮುಂದಿನ ವಾರದಲ್ಲಿ ಉತ್ತರ ಕರ್ನಾಟಕ ಭಾಗದಾದ್ಯಂತ ಮಾರುತಗಳು ಆವರಿಸಲಿವೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.